(ಶ್ರೀ ಎಸ್. ನಿಜಲಿಂಗಪ್ಪ)

ಅವು ಅಭಿವೃದ್ಧಿಯಾಗುವುದಿಲ್ಲ. ಆಗಿಂದಾಗ್ಗೆ ಹೆಚ್ಚು ನೀರು ಬಂದು ಅವು ವ್ಯರ್ಥವಾಗಿ ಹೋಗುವುದ ಕ್ಕಿಂತ ಅವನ್ನು ಉಪಯೋಗ ಮಾಡಿಕೊಂಡರೆ ವ್ಯವಸಾಯ ಮಾಡಲು ಅನುಕೂಲವಾಗುತ್ತದೆ. ಅದಕ್ಕಾಗಿ ಎಷ್ಟು ಮಟ್ಟದವರೆಗೆ ನೀರನ್ನು ನಿಲ್ಲಿಸಬಹುದು ಮತ್ತು ಎಷ್ಟು ನೀರನ್ನು ಕೆಳಗೆ ಇರುವ ಜಮೀನಿಗೆ ಕೊಟ್ಟರೆ ಅನುಕೂಲವಾಗುತ್ತದೆ ಎನ್ನುವುದನ್ನು ವಿಚಾರ ಮಾಡಿ ಸರಿಯಾದ ರೀತಿಯಲ್ಲಿ ಇಲ್ಲಿನ ಜನಕ್ಕೆ ನೀರನ್ನು ಕೊಡಲು ಒಂದು ರಿಪೋರ್ಟನ್ನು ಸರಕಾರಕ್ಕೆ ಕಳುಹಿಸಬೇಕೆಂದು ಹೇಳಲಾಗಿದೆ.

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಉಪಸಚಿವರು ಫ್ಲಡ್ ಜೋರ್ಡು ಕೆಲಸಗಳಿಗಾಗಿ ಫ್ಲಡ್ ಪ್ರೊಟೆಕ್ಷನ್ನು ವರ್ಕ್ಸ್‌ಗಳಲ್ಲಿ ಕೇಂದ್ರದಿಂದ ಸಹಾಯ ಪಡೆದರೂ ಯಾವ ಕೆಲಸಗಳನ್ನೂ ಮಾಡಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

Mr. SPEAKER.—It is disallowed.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಕೆರೆಯಲ್ಲಿ 10 ಸಾವಿರ ಯೂನಿಟ್ಸು ಇದೆ ಎಂದರೆ ಇದು ಬಹಳ ದೊಡ್ಡ ಕೆರೆಯೇ ಆಯಿತು. ಇಂತಹ ದೊಡ್ಡ ಕೆರೆಯ ಅಚ್ಚುಕಟ್ಟನ್ನು ಜಾಸ್ತಿ ಮಾಡಿ ಇಲ್ಲಿ ಒಂದು ಟೆಂಪರರಿ ರಿಸರ್ವಾಯರ್ ತರಹ ಇಟ್ಟುಕೊಂಡು ಭದ್ರಾ ಚಾನಲ್‌ನಿಂದ ಬರುವ ನೀರನ್ನೂ ಉಪಯೋಗಿಸುವುದಕ್ಕೆ ಆಗುವುದಿಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಇಲ್ಲ ಹೊಳಲ್ಕೆರೆ ಭಾಗದ ಕಡೆಯಿಂದಲೂ ನೀರು ಬರುತ್ತದೆ. ಅಲ್ಲದೆ ಆಗಿಂದಾಗ್ಗೆ ಹೊಳಲಕೆರೆ ಕ್ಷಾಮಕ್ಕೆ ತುತ್ತಾಗುತ್ತಿರುವ ಪ್ರದೇಶವಾಗಿರುವುದರಿಂದ ಇಲ್ಲಿ ಫ್ಲಡ್ ರಿಲೀಫ್ ವರ್ಕ್ಸ್‌ಗಳು ಎಂದು ಇಲ್ಲಿ ಕೆಲವು ಯೋಜನೆಗಳನ್ನು ಮಾಡಿ ಅಲ್ಲಿಂದ ಬರುವ ಚಾನಲ್ ನೀರನ್ನೂ ಇಲ್ಲಿ ಹೇಗೆ ಉಪಯೋಗಿಸಿಕೊಳ್ಳಲು ಸಾಧ್ಯ ಎನ್ನುವುದನ್ನೂ ಪರಿಶೀಲನೆ ಮಾಡುತ್ತಿದ್ದೇವೆ.

Works intended to be taken up under Minor Irrigation Scheme.

*Q.—74. Smt. G. C. BHAGEERATHAMMA (Tumkur).—

Will the Government be pleased to state :—

(*a*) the names of works intended to be taken up under Minor Irrigation Scheme in Tumkur Taluk during the IV Plan period ;

(*b*) the extent of land that would be irrigated and the extent of land going to be submerged under each one of the above works ?

A.—Sri ALUR HANUMANTHAP PA (Deputy Minister for Minor Irrigation).—

(*a*) Programme for the entire IV plan cannot be made in view of heavy spill-over works to be completed.

(*b*) Does not arise in view of reply to clause (*a*).

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಮುಗಿದಿರುವ ಕಾಮಗಾರಿಗಳಲ್ಲಿ ದೊಡ್ಡ ನೀರಾವರಿ ಯೋಜನೆಗಳು ನಮ್ಮ ತಾಲ್ಲೂಕಿನಲ್ಲಿ ಯಾವ ಯಾವುವು ಆಗಿವೆ ತಿಳಿಸುತ್ತೀರಾ ?

†ಶ್ರೀ ಆಲೂರು ಹನುಮಂತಪ್ಪ.—ಇದರ ವಿವರಗಳ ಪಟ್ಟಿಬೇಕಾದರೆ ಕೊಡುತ್ತೇನೆ. ಹಳೆಯ ಕೆಲಸಗಳನ್ನು ಮುಗಿಸಿ ಇತ್ತೀಚೆಗೆ ಹೊಸ ಕೆಲಸಗಳನ್ನು ಮಾಡಲು ಹಣವನ್ನು ಸರಕಾರ ಮಂಜೂರು ಮಾಡಿದೆ ಮತ್ತು ಇದರಲ್ಲಿ ಒಂದೆರಡು ಕೆಲಸಗಳು ಈಗಾಗಲೇ ಮುಗಿದಿವೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಹೊಸ ಕೆಲಸಗಳು ಯಾವ ಯಾವುವು ?

ಶ್ರೀ ಆಲೂರು ಹನುಮಂತಪ್ಪ.—ನತ್ಯಮಂಗಲ ಟ್ಯಾಂಕ್ ರೆಸ್ಟೊರೇಷನ್ ಕೆಲಸ ನುಮಾರು 59,700 ರೂಪಾಯಿಗಳು ಮತ್ತು ಅರೇಗುಜ್ಜನಹಳ್ಳಿ ಟ್ಯಾಂಕ್ ರೆಸ್ಟೊರೇಷನ್ ಕೆಲಸ ನಮಾರು 9,000 ಎನ್ನುವುದು.

ಶ್ರೀ ಕೆ. ಲಕ್ಕಪ್ಪ.—ನಮ್ಮ ಹಣಕಾಸಿನ ನಚಿವರು, ಮರಾಮತ್ತು ಶಾಖಾ ನಚಿವರು ಹಾಗೂ ಗೃಹ ನಚಿವರು ನಮ್ಮ ತುಮಕೂರು ಜಿಲ್ಲೆಗೆ ಬಂದು ಇಲ್ಲಿ ಅಭಾವಕ್ಕೆ ಒಳಗಾಗಿರುವ ಪ್ರದೇಶ ಗಳಾವುವು ಎನ್ನುವುದನ್ನೆಲ್ಲಾ ಪರಿಶೀಲನೆ ಮಾಡಿ ಒಂದು ಪಟ್ಟಿಯನ್ನು ತಯಾರು ಮಾಡಿಕೊಂಡು ನರಕಾರಕ್ಕೆ ಒದಗಿಸಿ ಇಲ್ಲಿಗೆ ಬೇಕಾಗುವ ಇರಿಗೇಷನ್ನು ಯೋಜನೆಗಳನ್ನೆಲ್ಲಾ ಮಂಜೂರು ಮಾಡುತ್ತೇ ವೆಂದು ಭರವಸೆ ಹೇಳಿ ಬಂದಿದ್ದರೂ ಕೂಡ ಇಲ್ಲಿ ಮಾನ್ಯ ಉಪಮಂತ್ರಿಗಳು ಉತ್ತರ ಕೊಡುವಾಗ ಪದೇ ಪದೇ ಯಾವ ಕೆಲಸಗಳನ್ನೂ ತೆಗೆದುಕೊಂಡು ಇಲ್ಲ ಎನ್ನುವುದು ನರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ನದಸ್ಯರು ನರಿಯಾಗಿ ಅರ್ಥ ಮಾಡಿಕೊಂಡಿಲ್ಲ. ಇತ್ತೀಚೆಗೆ ಮಾನ್ಯ ಹಣಕಾಸಿನ ನಚಿವರು, ಮರಾಮತ್ತು ನಚಿವರು ಹಾಗೂ ಗೃಹ ನಚಿವರು ಪ್ರವಾಸ ಮಾಡಿಕೊಂಡು ತುಮಕೂರಿನಿಂದ ಬಂದ ಮೇಲೆ ಈ ತಾಲ್ಲೂಕಿಗೆ ನಂಬಂಧಪಟ್ಟ ಕೆಲಸಗಳನ್ನೆಲ್ಲಾ ಪರಿಶೀಲನೆ ಮಾಡಿ ನುಮಾರು 19 ಲಕ್ಷ ರೂಪಾಯಿಗಳ ಹೊನ ಕೆಲಸಗಳನ್ನೂ ಈಗಾಗಲೇ ಮಾಡಲು ನರಕಾರ ಮಂಜೂರಾತಿ ಕೊಟ್ಟಿದೆ.

ಶ್ರೀ ಕೆ. ಲಕ್ಕಪ್ಪ.—ತುಮಕೂರು ತಾಲ್ಲೂಕಿನಲ್ಲಿ ಬರೀ ವಿರೋಧಪಕ್ಷದ ನದಸ್ಯರುಗಳೇ ಇಲ್ಲಿಗೆ ನದಸ್ಯರಾಗಿ ಆರಿಸಿ ಬಂದಿರುವುದರಿಂದ ನಮ್ಮ ತುಮಕೂರು ಜಿಲ್ಲೆಯ ಕೆಲಸಗಳೆಲ್ಲಾ ಸ್ಥಗಿತವಾಗು ತ್ತಿದೆ ಎನ್ನುವುದು ನರಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ನರಕಾರಕ್ಕೆ ಅಂತಹ ಯಾವ ಭಾವನೆಯೂ ಇಲ್ಲ. ಇದು ಮಾನ್ಯ ನದಸ್ಯರ ತಪ್ಪು ಕಲ್ಪನೆ ಎಂದು ನಾನು ಹೇಳುತ್ತೇನೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಈಗ ಉಳಿದಿರುವ ಕೆಲಸ ಕಾರ್ಯಗಳನ್ನು ಪೂರ್ತಿ ಮಾಡಲು ಇನ್ನೂ ನಿಧಾನವಾಗುತ್ತಿದೆ. ಇಷ್ಟು ತಡವಾಗಲು ಕಾರಣವೇನು ?

ಶ್ರೀ ಆಲೂರು ಹನುಮಂತಪ್ಪ.—ಅನೇಕ ಕಡೆಗಳಲ್ಲಿ ಅಕ್ಟಿಸಿಷನ್ನು ಕೇನುಗಳಿವೆ ಮತ್ತೆ ಕೆಲವು ಕಡೆಗಳಲ್ಲಿ ಕಂಟ್ರಾಕ್ಟರುಗಳ ಅಭಾವದಿಂದಾಗಿ ನಿಧಾನವಾಗುತ್ತಿದೆ. ಈಗ ಆದಷ್ಟು ತ್ವರಿತವಾಗಿ ಇಲ್ಲಿನ ಕೆಲಸಗಳನ್ನು ಮಾಡುತ್ತಿದ್ದೇವೆ. ಈಗಾಗಲೇ ಕೆಲವು ಕೆಲಸಗಳು ಮುಗಿದಿವೆ. ಹೊನ ಕೆಲನ ಗಳಿಗೆಂದು ನುಮಾರು 4·54 ಲಕ್ಷದಷ್ಟು ಹಣ ಕೂಡ ಒದಗಿನಲಾಗಿದೆ.

Channelising irrigation loans through other Land Development Banks.

*Q.—371. Sri P. VENKATAGIRIYAPPA (Kolar).—

Will the Government be pleased to state :—

(*a*) whether Government have taken a decision to channelise all irrigation and other Development loans through Land Development Co-operative Bank ;

(*b*) if so, what is the action taken so far in the matter ?

A.—Sri K. PUTTASWAMY (Minister for Co-operation and Housing).—

(*a*) Government have decided to channelise all irrigation loans through Land Development Banks.